ವರಾಹಿ ನೀರಾವರಿ ಯೋಜನೆ

638 (5201) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) :ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವರಾಹಿ ನೀರಾವರಿ ಯೋಜನೆ ಯಾವಾಗ ಪ್ರಾರಂಭವಾಯಿತು: ಇದರ ಮೂಲ ಉದ್ದೇಶವೇನು: ಯೋಜನೆಯ ಕಾಮಗಾರಿ ಮುಕ್ತಾಯದ ಅವಧಿಯಷ್ಟು: ಯೋಜನೆಯ ಒಟ್ಟು ವೆಚ್ಚ ಎಷ್ಟು:

ಆ) ಹಾಗಾದಲ್ಲಿ ಅವಧಿಯೊಳಗೆ ಯೋಜನೆ ಮುಕ್ತಾಯವಾಗದಿರಲು ಕಾರಣವೇನು: ಇದಕ್ಕೆ ಹೊಣೆಯಾರು: ಇದುವರೆಗೆ ಆದ ವೆಚ್ಚ ಎಷ್ಟು:

ಇ) ಯೋಜನೆ ಈಗ ಯಾವ ಹಂತದಲ್ಲಿದೆ: ಯೋಜನೆ ಮುಗಿಯಲು ಇನ್ನೂ ಎಷ್ಟು ಅವಧಿ ಮತ್ತು ಮೊಬಲಗು ಬೇಕಾಗುತ್ತದೆ:

ಈ) ಯೋಜನೆಯ ಅವಧಿಯೊಳಗೆ ಕಾಮಗಾರಿಗಳು ಮುಕ್ತಾಯವಾಗದೇ ಇದ್ದಲ್ಲಿ ಸರ್ಕಾರಕ್ಕೆ ಯೋಜನಾ ವೆಚ್ಚಗಳು ದುಬಾರಿಯಾಗುವುದಿಲ್ಲವೇ: ಆದ್ದರಿಂದ ಯೋಜನೆಗಳ ವಿಳಂಬಕ್ಕೆ ಕಾರಣಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಮೂಲ ವಾರಾಹಿ ನೀರಾವರಿ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 71 ಬಿಐಪಿ 76 ಬೆಂಗಳೂರು ದಿನಾಂಕ 27-3-1979 ರಲ್ಲಿ ರೂ. 943.00 ಲಕ್ಷಗಳ ಯೋಜನಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿ 1979-80 ರಲ್ಲಿ ಯೋಜನೆಯ ಕಾಮಕಾರಿಯನ್ನು ಕೈಗೆತ್ತಿಕೊಳ್ಳಲು ಆದೇಶಿಸಲಾಗಿತ್ತು. ಈ ಯೋಜನೆಯ ಮೂಲ ಉದ್ದೇಶ ಕುಂದಾಪುರ ಮತ್ತು ಉಡುಪಿ ತಾಲ್ಲೂಕಿನ ಒಟ್ಟು 15,702 ಹೆಕ್ಟೇರ್ (38,800 ಇಕರೆ) ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವುದಾಗಿದೆ.

1980 ರಲ್ಲಿ ಈ ಯೋಜನೆಯನ್ನು ಪ್ರಾರಂಭಿಸುವ ಹಂತದಲ್ಲಿ ಈ ಯೋಜನೆಯಿಂದ ನೀರಾವರಿ ಸೌಲಭ್ಯವನ್ನು ಒದಗಿಸುವುದರ ಜೊತೆಗೆ ವಿದ್ಯುತ್ ಉತ್ಪಾದಿಸುವ ಸಲುವಾಗಿ ಸರ್ಕಾರದ ಉನ್ನತ ಮಟ್ಟದಲ್ಲಿ ಹಲವಾರು ಬಾರಿ ಚರ್ಚಿಸಿ, ಯೋಜನೆಯನ್ನು ತಾಂತ್ರಿಕವಾಗಿ ಮಾರ್ಪಡಿಸುವ ಬಗ್ಗೆ. ಇನ್‌ವೆಸ್ಟಿಗೇಶನ್ ಮಾಡಿ ಪರಿಶೀಲಿಸಿ ಈ ಯೋಜನೆಯನ್ನು ಕೇವಲ ನೀರಾವರಿ ಸೌಲಭ್ಯಕ್ಕಾಗಿ ಬಳಸಬೇಕೇ ಅಥವಾ ನೀರಾವರಿ ಸೌಲಭ್ಯದ ಜೊತೆಗೆ ವಿದ್ಯುತ್ ಉತ್ಪಾದನೆಗೆ ಅವಕಾಶವಾಗುವಂತೆ ಪಿಕಅಪ್ ಡ್ಯಾಂ ನಿರ್ಮಿಸಬೇಕೇ ಎಂಬ ತೀರ್ಮಾನಕ್ಕೆ ಬರಲು ಸಾಕಷ್ಟು ಕಾಲಾವಕಾಶ ವ್ಯಯವಾಗಿರುತ್ತದೆ. ಅಂತಿಮವಾಗಿ ಕೇಂದ್ರ ಅರಣ್ಯ ಮತ್ತು ಪರಿಯಾವರಣ ಇಲಾಖೆ, ನವದೆಹಲಿ ಇವರ ಪತ್ರ ದಿನಾಂಕ 20-03-2001 ರಲ್ಲಿನ ಸೂಚನೆಯಂತೆ ಈ ಯೋಜನೆಯನ್ನು ಕೇವಲ ನೀರಾವರಿ ಸೌಲಭ್ಯವನ್ನು ಒದಗಿಸಲು ಮಾರ್ಪಡಿಸಿ ಕಾರ್ಯರೂಪಕ್ಕೆ ತರಲಾಗುತ್ತಿದೆ. ಹಾಲಿ ಈ ಯೋಜನೆಯನ್ನು ಡಿಸೆಂಬರ್ 2005 ರ ಅಂತ್ಯಕ್ಕೆ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 2001-02 ರ ದರಪಟ್ಟಿಯ ಪ್ರಕಾರ ಈ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತವು ರೂ.27500 ಲಕ್ಷಗಳಾಗಿರುತ್ತದೆ.

ಆ) ವಾರಾಹಿ ನೀರಾವರಿ ಯೋಜನೆಯನ್ನು ಕೇವಲ ನೀರಾವರಿ ಸೌಲಭ್ಯಕ್ಕಾಗಿ ಬಳಸಲು ಒಂದು ಡೈವರಶನ್ ವಿಯರ್ ನಿರ್ಮಿಸಬೇಕೆ ಅಥವಾ ನೀರಾವರಿ ಸೌಲಭ್ಯದ ಜೊತೆಗೆ ವಿದ್ಯುತ್

ಉತ್ಪಾದನೆಗೆ ಅವಕಾಶ ಕಲ್ಪಿಸಿ ಪಿಕ್‌ಅಪ್ ಡ್ಯಾಂ ನಿರ್ಮಾಣ ಮಾಡಬೇಕೇ ಎಂಬ ಬಗ್ಗೆ ಸರ್ಕಾರದ ಉನ್ನತ ಮಟ್ಟದಲ್ಲಿ ಚರ್ಚಿಸಿ, ಮುಳುಗಡೆಗೆ ಒಳಪಡುವ ರಕ್ಷಿತ ಅರಣ್ಯ ಪ್ರದೇಶದ ಬಿಡುಗಡೆ ಕುರಿತು ಕೇಂದ್ರ ಅರಣ್ಯ ಮತ್ತು ಪರಿಯಾವರಣ ಇಲಾಖೆಯ ಅಭಿಪ್ರಾಯ ಪಡೆಯಲು 1980 ರಿಂದ 2001 ರವರೆಗೆ ಕಾಲ ವ್ಯಯವಾಗಿರುವ ಕಾರಣ ಯೋಜನೆಯ ಅನುಷ್ಠಾನ ವಿಳಂಬವಾಗಿದೆ. ಈ ವಿಚಾರವು ಸರ್ಕಾರದ ಪಾಲಿಸಿ ವಿಷಯವಾಗಿದ್ದು ಇದಕ್ಕೆ ಯಾವುದೇ ಅಧಿಕಾರಿಗಳು ಕಾರಣರಲ್ಲ. ವಾರಾಹಿ ನೀರಾವರಿ ಯೋಜನೆಗಾಗಿ ಜೂನ್ 2003 ರ ಅಂತ್ಯದವರೆಗೆ ರೂ. 3426.61 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಈ ಪೈಕಿ ಸಿಬ್ಬಂದಿ ವೆಚ್ಚ ರೂ. 569.45 ಲಕ್ಷಗಳು ಹಾಗೂ ಕಾಮಕಾರಿ ವೆಚ್ಚ ರೂ. 2857.16 ಲಕ್ಷಗಳಾಗಿರುತ್ತದೆ.

ಇ) ಯೋಜನೆಯ ತ್ವರಿತ ಅನುಷ್ಠಾನಕ್ಕಾಗಿ ಡೈವರಶ್‌ನ್ ವಿಯರ್ ನಿರ್ಮಾರ್ಣ, ವಾರಾಹಿ ಬಲದಂಡೆ ಕಾಲುವೆ 78 ಕಿ.ಮಿ.ಉದ್ದ ಎಡದಂಡೆ ನಾಲೆ 44 ಕಿ.ಮಿ.ಉದ್ದ ಮತ್ತು 33 ಕಿ.ಮಿ. ಉದ್ದದ ಏತ ನೀರಾವರಿ ಕಾಲುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯನ್ನು ಡಿಸೆಂಬರ್ 2005 ರ ಅಂತ್ಯಕ್ಕೆ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ. ಈ ಯೋಜನೆಗೆ ಇನ್ನೂ ಸುಮಾರು ರೂ. 24073.39 ಲಕ್ಷಗಳ ಅವಶ್ಯಕತೆ ಇರುತ್ತದೆ.

ಈ) ಈ ಯೋಜನೆಯು ನಿಗದಿತ ಅವಧಿಯಲ್ಲಿ ಮುಕ್ತಾಯವಾಗದೇ ಇದ್ದಲ್ಲಿ ವರ್ಷಾವಧಿ ದರಗಳ ಹೆಚ್ಚಳದಿಂದ ಯೋಜನಾ ವೆಚ್ಚ ಅಧಿಕವಾಗುತ್ತದೆ. ಈ ಯೋಜನೆಯ ವಿಳಂಬಕ್ಕೆ ಕಾರಣ ಈ ಕೆಳಕಂಡಂತೆ ಇರುತ್ತದೆ.

1) ಅನುದಾನ ಕೊರತೆ.

2) ಕೇಂದ್ರ ಅರಣ್ಯ ಮತ್ತು ಪರಿಯಾವರಣ ಇಲಾಖೆ, ನವದೆಹಲಿ ಇವರಿಂದ ಅಂತಿಮವಾಗಿ ಬಿಡುಗಡೆಯಾಗಬೇಕಾದ 129.60 ಹೆಕ್ಟೇರ್ ರಕ್ಷಿತ ಅರಣ್ಯ ಪ್ರದೇಶದ ಬಿಡುಗಡೆಯಲ್ಲಿ ಉಂಟಾಗಿರುವ ವಿಳಂಬ.

3) ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬ

4) ಪರಿಸರ ಇಲಾಖೆಯಿಂದ ಅನುಮತಿ ಪಡೆಯಲು ಆಗಿರುವ ವಿಳಂಬ ಇತ್ಯಾದಿ

ತುಮಕೂರು ಜಿಲ್ಲೆಯ ಸ್ತ್ರೀ ಶಕ್ತಿ ಗುಂಪುಗಳಿಗೆ ಸುತ್ತು ನಿಧಿ ಬಿಡುಗಡೆ

639 (5397) : ಶ್ರೀ ಲಕ್ಷ್ಮಿ ನಾರಾಯಣ ಎಂ.ಡಿ. (ಅಣ್ಣಯ್ಯ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಎಷ್ಟು ಸ್ತ್ರೀಶಕ್ತಿ ಗುಂಪು ರಚನೆಯಾಗಿವೆ ತಾಲ್ಲೂಕುವಾರು ವಿವರ ನೀಡುವುದು.

ಆ) ಎಷ್ಟು ಸ್ತ್ರೀಶಕ್ತಿ ಗುಂಪುಗಳಿಗೆ ಸುತ್ತುನಿಧಿ ಬಿಡುಗಡೆ ಮಾಡಲಾಗಿದೆ?

ಇ) ಎಲ್ಲಾ ಸ್ತ್ರೀಶಕ್ತಿ ಗುಂಪುಗಳಿಗೆ ಒಂದೇ ಸಲ ಸುತ್ತುನಿಧಿ ಕೊಡದಿರಲು ಕಾರಣವೇನು?

ಈ) ಉಳಿದಿರುವ ಸ್ತ್ರೀಶಕ್ತಿ ಗುಂಪುಗಳಿಗೆ ಯಾವಾಗ ಸುತ್ತುನಿಧಿ ನೀಡಲಾಗುವುದು

ಉ) ಸುತ್ತುನಿಧಿ ಇಟ್ಟಿರುವ ಹಣವನ್ನು ಬೇರೆಕಡೆ ವರ್ಗಾಯಿಸಿದೆಯೇ; ಹಾಗಿದ್ದಲ್ಲಿ ಅದಕ್ಕೆ ಕಾರಣವೇನು? (ಪ್ರತಿಯೊಂದು ತಾಲ್ಲೂಕಿನ ವಿವರವನ್ನು ಕೊಡುವುದು)

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):